ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ**

**ಆನಂದರಾವ್ ವೃತ್ತ, ಬೆಂಗಳೂರು-560009**

ದೂರವಾಣಿ:080-22879336 ಇ-ಮೇಲ್:spmbeckar@gmail.com

ಸಂ: ಬಿಇಸಿ/ಐಪಿಜಿ/05/2018-19 ದಿನಾಂಕ:13.11.2018

# ಅಂತಿಮ ನೋಟೀಸ್

ಸ್ನಾತಕೋತ್ತರ ವ್ಯಾಸಂಗದ ನಂತರ ಆಯುಕ್ತಾಲಯದಲ್ಲಿ ಸ್ಥಳ ನಿರೀಕ್ಷಣೆಯಲ್ಲಿದ್ದ ತಜ್ಞ ವೈದ್ಯರುಗಳಿಗೆ ಅಧಿಕೃತ ಜ್ಞಾಪನಾ ಪತ್ರ ಸಂ: ಬಿಇಸಿ/ಐಪಿಜಿ/05/2018-19, ದಿನಾಂಕ: 10.08.2018ರನುಸಾರ ವಿದ್ಯಾರ್ಹತೆ ಮತ್ತು ತಜ್ಞತೆಗನುಗುಣವಾಗಿ su-motto ದಡಿಯಲ್ಲಿ ಸ್ಥಳ ನೇಮಕಾತಿ ಮಾಡಿರುವಂತೆ ಸಾರ್ವಜನಿಕ ಹಿತಾಸಕ್ತಿಗನುಗುಣವಾಗಿ ರಾಜ್ಯದ ಶ್ರೀಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆಯನ್ನು ತ್ವರಿತವಾಗಿ ಪೂರೈಸುವ ಸಲುವಾಗಿ ದಿನಾಂಕ: 05.09.2018 ಮತ್ತು 28.09.2018ರಂದು ಪತ್ರದಲ್ಲಿ ನೇಮಿಸಿರುವ ಸ್ಥಳಗಳಲ್ಲಿ ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು.

| ಕ್ರಮ ಸಂ | ವೈದ್ಯರ ಮತ್ತು ವ್ಯಾಸಂಗ ಪೂರ್ಣಗೊಳಿಸಿದ ವೈದ್ಯಕೀಯ ಮಹಾವಿದ್ಯಾಲಯದ ಹೆಸರು | ತಜ್ಞತೆ | ಸ್ಥಳ ನಿಯುಕ್ತಿ ಮಾಡಿರುವ ಸ್ಥಳ | Reported/ Not Reported |
|---|---|---|---|---|
| 1 | DR. ABHILASH. S.B<br>BMC, BANGALORE | MSGS | General Hospital, Gokak, Belgaum Dist. | NR |
| 2 | DR. NIRMALA.N.S<br>RAJARAJESHWARI MEDICAL COLLEGE AND HOSPITAL, BANGALORE | MSGS | General Hospital, Hukkeri, Belgaum Dist. | NR |
| 3 | DR. VISHWANATHA B R<br>VIMS, BELLARY | MSGS | General Hospital, Chincholi, Gulbarga Dist. | NR |
| 4 | DR. SYEDA KAUSAR ANJUM,<br>KIMS, BANGALORE | MD PEDIATRICS | General Hospital, Kudligi, Bellary Dist. | NR |

ಕ್ರಮ ಸಂ: 01 ರಿಂದ 04 ರವರೆಗಿನ ವೈದ್ಯರುಗಳು ದಿನಾಂಕ: 05.09.2018 ಮತ್ತು 28.09.2018ರಂದು ನೋಟಿಸ್ ಜಾರಿ ಮಾಡಿದ್ದರೂ ಸಹಾ ಕರ್ತವ್ಯಕ್ಕೆ ವರದಿ ಮಾಡದೇ ಸರ್ಕಾರದ ಸಾರ್ವಜನಿಕ ಉದ್ದೇಶಿತ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಸಹಕಾರತೆ/ಅವಿಧೇಯತೆ ತೋರಿರುವುದನ್ನು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರನುಸಾರ ಗಂಭೀರವಾಗಿ ಪರಿಗಣಿಸಿದೆ.

ನೋಟೀಸ್ ಜಾರಿ ಮಾಡಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲವಾದಲ್ಲಿ ಸರ್ಕಾರದ ಅಧಿಸೂಚನೆ ಸಂ: ಆಕುಕ 334 ಆರ್‌ಜಿಯು 2012 ಬೆಂಗಳೂರು, ದಿನಾಂಕ: 23.11.2013 ಮತ್ತು ಬಂಧಪತ್ರದನುಸಾರ ದಂಡದ ಮೊತ್ತದ ಜೊತೆಗೆ ಸರ್ಕಾರವು ಸಾರ್ವಜನಿಕ ಹಣವನ್ನು ವ್ಯಯಿಸಿ ವ್ಯಾಸಂಗದ ಅವಧಿಯಲ್ಲಿ ಭರಿಸಲಾಗಿರುವ ವೇತನ, ಬೋಧನ ಶುಲ್ಕ, ಇತರೆ ಭತ್ಯೆಗಳನ್ನು ಬಡ್ಡಿಯನ್ನೊಳಗೊಂಡಂತೆ ವಸೂಲು ಮಾಡಲು ಹಾಗೂ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರನುಸಾರ ಕ್ರಮಕೈಗೊಳ್ಳಲಾಗುವುದೆಂದು ಅಂತಿಮವಾಗಿ ಎಚ್ಚರಿಕೆ ನೀಡಲಾಗಿದೆ.

ಆದ್ದರಿಂದ ಈ ಕೂಡಲೇ ಕರ್ತವ್ಯಕ್ಕೆ ವರದಿ ಮಾಡಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಆಯುಕ್ತರು,
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು

**ಪ್ರತಿಯನ್ನು,**

ಕ್ರಮ ಸಂ: 01 ರಿಂದ 04 ರವರೆಗಿನ ಸೇವಾನಿರತ ಸ್ನಾತಕೋತ್ತರ ವೈದ್ಯರುಗಳ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

Scanned by CamScanner